**ದಿನಾಂಕಃ 06.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಭಾರತೀಯ ಸಾಕ್ಷ್ಯ ಅಧಿನಿಯಮಯದ ಕಲಂ 63 ರಡಿ ಪ್ರಮಾಣ ಪತ್ರದೊಂದಿಗೆ ಸಲ್ಲಿಸಿರುವ ಅಕೌಂಟ್ ಸ್ಟೇಟ್ ಮೆಂಟ್ ಅನ್ನು **ನಿಪಿ 16** ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 3ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಿಪಿ 16 ರಲ್ಲಿ ಬ್ಯಾಂಕಿನ ಸೀಲು ಮತ್ತು ಸಹಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಆನ್‌ಲೈನ್ ಮೂಲಕ ತೆಗೆದ ದಾಖಲಾತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ವಾಹನವನ್ನು ಮಾಸಿಕ ಕಂತುಗಳ ಆಧಾರದ ಮೇರೆಗೆ ಖರೀದಿ ಮಾಡಿರುತ್ತೇನೆ. ಒಟ್ಟು ಮೊತ್ತ ರೂ.2,20,000/- ಆಗಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಬಿಲ್ಲನ್ನು ಹಾಜರುಪಡಿಸಿಲ್ಲ. ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನದ ಮೌಲ್ಯ ಕೇವಲ ರೂ.50,000/-ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಪಡೆದಿದ್ದು, ಕಂಪನಿಯ ಹೆಸರು ನೆನಪಿಲ್ಲ. ನಾನು ಪರಿಹಾರ ಕೇಳಿರುವಷ್ಟು ಹಣ ಸಂಪೂರ್ಣವಾಗಿ ನನ್ನ ವಾಹನದ ವಿಮಾ ಕಂಪನಿಯಿಂದ ಮರುಪಾವತಿಯಾಗಿರುತ್ತದೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**